ದಿನಾಂಕಃ 20/09/2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು ಃ ವಾದಿ ಪರ ಶ್ರೀ ಆರ್ ಜಿ ಕೆ ವಕೀಲರಿಂದಃ

3. ವಿಲ್ ಮಾಡುವ ಸಮಯದಲ್ಲಿ ಸಿದ್ಧಲಿಂಗಪ್ಪನಿಗೆ ಸುಮಾರು 70-80 ವರ್ಷ ವಯಸ್ಸಾಗಿತ್ತು. ಮೃತ್ಯು ಪತ್ರದಲ್ಲಿ ಎಷ್ಟು ವಯಸ್ಸನ್ನು ಕಾಣಿಸಿದ್ದಾರೆ ಎಂದರೆ ನನಗೆ ನೆನಪಿಲ್ಲ. ನಾನು ಹೇಳುವ ತಾರೀಖಿನಂದು ಸಿದ್ದಲಿಂಗಪ್ಪನಿಗೆ 82 ವರ್ಷ ವಯಸ್ಸಿತ್ತು ಎಂದರೆ ಸುಳ್ಳು. ಮೃತ್ಯು ಪತ್ರದಲ್ಲಿ ಯಾವ ಸರ್ವೇ ನಂಬರಗಳನ್ನು ಕಾಣಿಸಲಾಗಿದೆ ಎಂದರೆ ಸರ್ವೇ ನಂಬರ ನೆನಪಿಲ್ಲ. ಒಂದು ಹಿರೇಗುಂಜಾಳ ಮತ್ತು ಇನ್ನೊಂದು ಭರಧ್ವಾಡ ಸ್ವತ್ತುಗಳು. ಉತಾರಗಳು ಆ ಸಮಯದಲ್ಲಿ ಸಿದ್ಧಲಿಂಗಪ್ಪನ ಹೆಸರಿಗಿತ್ತು. ಸದರಿ ಸ್ವತ್ತುಗಳು ಅವರ ಕುಟುಂಬಕ್ಕೆ ಹಿರಿಯರಿಂದ ಬಂದ ಆಸ್ತಿಗಳು ಎಂದರೆ ಸರಿಯಲ್ಲ. ಅವರ ತಮ್ಮನಿಂದ ವಿಲ್ ಮೂಲಕ ಬಂದ ಆಸ್ತಿಗಳು ಎಂದು ನುಡಿಯುತ್ತಾರೆ. ಸದರಿ ಮೃತ್ಯು ಪತ್ರವನ್ನು ನಾನು ನೋಡಿಲ್ಲ. ಸಿದ್ಧಲಿಂಗಪ್ಪನಿಗೆ 82 ವರ್ಷ ವಯಸ್ಸಾಗಿದ್ದರಿಂದ ಕಣ್ಣು ಕಾಣಿಸುತ್ತಿರಲಿಲ್ಲ ಹಾಗೂ ಅಡ್ಡ್ಯಾಡಲು ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಸಿದ್ದಲಿಂಗಪ್ಪನಿಗೆ ಒಟ್ಟು ಐದು ಜನ ಗಂಡು ಮಕ್ಕಳು. ಹೆಣ್ಣು ಮಕ್ಕಳು ಎಷ್ಟು ಇದ್ದರು ಎಂದು ನನಗೆ ಗೊತ್ತಿಲ್ಲ. ಸಿದ್ಧಲಿಂಗಪ್ಪನ ಆಸ್ತಿಯಲ್ಲಿ ವಾಟ್ನಿ ಆಗಿಲ್ಲ ಎಂದರೆ ಆಗಿದೆ. ಯಾವಾಗ ಎಂದು ಗೊತ್ತಿಲ್ಲ. ಆ ಸಂಬಂಧ ಕಾಗದ ನೋಡಿದ್ದೀರಾ ಎಂದರೆ ವಾಟ್ನಿ ಬಗ್ಗೆ ನನಗೆ ಗೊತ್ತಿಲ್ಲ. ಆ ಬಗ್ಗೆ ಆಸ್ತಿ ಉತಾರ ನೋಡಿದ್ದೀರಾ ಎಂದರೆ ಇಲ್ಲ. ಸಿದ್ಧಲಿಂಗಪ್ಪ ದೈಹಿಕ ಹಾಗೂ ಮಾನಸಿಕವಾಗಿ ಸಮರ್ಥನಿದ್ದು ಎಂದು ಆಸ್ಪತ್ರೆಗೆ ಹೋಗಿ ತೋರಿಸಿದ್ದನಾ ಎಂದರೆ ಇಲ್ಲ. ಆತನಿಗೆ ಕುಂದಗೋಳಕ್ಕೆ ಬರುವ ಪರಿಸ್ಥಿತಿಯೇ ಇರಲಿಲ್ಲ ಎಂದರೆ ಸರಿಯಲ್ಲ.

4. ಕುಂದಗೋಳಕ್ಕೆ ಬರುವ 3 ದಿನಗಳ ಮೊದಲು ಸಿದ್ಧಲಿಂಗಪ್ಪ ನನ್ನನ್ನು ಅವರ ಮನೆಗೆ ಕರೆಸಿಕೊಂಡಿದ್ದನು. ನಮ್ಮ ಹಾಗೂ ಅವರ ಮನೆಗಳು ಬೇರೆ ಬೇರೆ ಓಣಿಯಲ್ಲಿದೆ ಎಂದರೆ ಸರಿ. ಸಿದ್ಧಲಿಂಗಪ್ಪ ಮನಯ ಆಜು-ಬಾಜು ಸಾಕಷ್ಟು ಮನೆಗಳಿವೆ ಎಂದರೆ ಸರಿ. ಸಿದ್ಧಲಿಂಗಪ್ಪನ ಮಾಹಿತಿಯ ಮೇರೆಗೆ ಪಡೋಸಿ ದಸ್ತು ಬರಹಗಾರರು ಬರೆದಿರುತ್ತಾರೆ. ಪಡೋಸಿ ಡಬ್ಬಿ ಅಂಗಡಿ ಇಟ್ಟುಕೊಂಡಿರುತ್ತಾರೆ. ಡಬ್ಬಿ ಅಂಗಡಿಯ ಅಳತೆ ಎಷ್ಟು ಇದೆ ಎಂದು ಗೊತ್ತಿಲ್ಲ. 3-4 ಜನಗಳು ಕೂರುವಷ್ಟು ಇದೆ ಎಂದು ನುಡಿಯುತ್ತಾರೆ. ಸಿದ್ಧಲಿಂಗಪ್ಪ ಆ ದಿನ ಕುಂದಗೋಳಕ್ಕೆ ಬಂದಿಲ್ಲ ಎಂದರೆ ಸರಿಯಲ್ಲ. ಸಿದ್ಧಲಿಂಗಪ್ಪನ ಹೆಣ್ಣು ಹಾಗೂ ಗಂಡು ಮಕ್ಕಳು ಕೂಡಿಯೇ ಇದ್ದರು ಎಂದರೆ ಸರಿ. ಸ್ಟ್ಯಾಂಪ್ ತರಿಸಿ ವಿಲ್ ಬರೆಸಿದ್ದರು. ಸ್ಟ್ಯಾಂಪ್ ರೂ. 50/- ಮುಖ ಬೆಲೆದಿರಬಹುದು. ಬಹಳ ದಿನಗಳಾದ ಕಾರಣ

ನೆನಪಿಲ್ಲ. ಸ್ಟ್ಯಾಂಪ್ ಯಾರಿಂದ ತಂದರು ಎಂದು ನನಗೆ ಗೊತ್ತಿಲ್ಲ. ನಾನು ಸಹಿ ಮಾಡಿದ್ದೇನೆ ಎಂದು ಹೇಳಲಾದ ಪತ್ರದಲ್ಲಿ ಸ್ಟ್ಯಾಂಪ್ ಇತ್ತು. ಸದರಿ ವಿಲ್ ಸಿದ್ಧಲಿಂಗಪ್ಪನ ಮಾಹಿತಿಯ ಮೇರೆಗೆ ಬರೆದ ಪತ್ರವಲ್ಲ ಎಂದರೆ ಸರಿಯಲ್ಲ.

5. ನ್ಯಾಯಾಲಯಗಳಲ್ಲಿ ನಾನು ಸಾಕಷ್ಟು ಪ್ರಕರಣಗಳಿಗೆ ಆರೋಪಿ ಹಾಗೂ ಸಾಕ್ಷಿದಾರನಾಗಿ ಬಂದಿದ್ದೇನೆ ಎಂದರೆ ಆರೋಪಿಯಾಗಿ ಇಲ್ಲ. ಒಂದೆರಡು ಪ್ರಕರಣಗಳಲ್ಲಿ ಸಾಕ್ಷಿಯಾಗಿ ಬಂದಿದ್ದೇನೆ. ಆದರೆ ಕೇಸ ನಂಬರ ನೆನಪಿಲ್ಲ. ರಿತ್ತಿ ಎಂಬ ವ್ಯಕ್ತಿ ನನಗೆ ಗೊತ್ತಿಲ್ಲ. ಆತನ ವಿರುದ್ಧ ಇದ್ದ ಕೊಲೆ ಪ್ರಕರಣದಲ್ಲಿ ನಾನು ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿ. ನನ್ನನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಮಾಡಿದ್ದರು ಎಂದರೆ ನೆನಪಿಲ್ಲ. ನಾನು ಊರಿನಲ್ಲಿ ಸಾಕ್ಷಿ ಹೇಳುವ ಕೆಲಸವನ್ನು ಮಾಡುತ್ತೇನೆ ಎಂದರೆ ಸರಿಯಲ್ಲ.

6. ಸಿದ್ಧಲಿಂಗಪ್ಪ ದೈಹಿಕ ಹಾಗೂ ಮಾನಸಿಕವಾಗಿ ಮೃತ್ಯು ಪತ್ರ ಬರೆದುಕೊಡುವ ಸ್ಥಿತಿಯಲ್ಲಿರಲಿಲ್ಲ ಎಂದರೆ ಸರಿಯಲ್ಲ. ಕುಂದಗೋಳಕ್ಕೆ ನಾನು ಖಾಯಂ ಬರುತ್ತಿರುತ್ತೇನೆ ಎಂದರೆ ಸರಿಯಲ್ಲ. ತೋಟಗಾರಿಕೆ ಇಲಾಖೆಗೆ ಹೋಗುವ ರಸ್ತೆಯ ಪಕ್ಕದಲ್ಲಿ ಡಬ್ಬಿ ಅಂಗಡಿ ಇದೆ. ರಸ್ತೆ ಅಗಲೀಕರಣ ಆದಾಗ ಸದರಿ ಡಬ್ಬಿ ಅಂಗಡಿಯನ್ನು ತೆಗೆಸಿದ್ದರು ಎಂದರೆ ಇಲ್ಲ. ಹಾಗೆ ಇತ್ತು. ಸಿದ್ಧಲಿಂಗಪ್ಪನಿಗೆ ಧಮ್ ಖಾಯಿಲೆ ಇತ್ತು ಎಂದರೆ 5-6 ವರ್ಷಗಳ ಹಿಂದೆ ಇತ್ತು. 5 ತಿಂಗಳು ಚಿಕಿತ್ಸೆ ಪಡೆದಿದ್ದ. ಯಾವ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದ ಎಂದು ನನಗೆ ಗೊತ್ತಿಲ್ಲ. ಸಿದ್ದಲಿಂಗಪ್ಪನಿಗೆ ಮೃತ್ಯು ಪತ್ರ ಮಾಡುವ ಅಧಿಕಾರ ಇರಲಿಲ್ಲ ಮತ್ತು ಆತ ಮೃತ್ಯು ಪತ್ರ ಮಾಡಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸಿದ್ಧಲಿಂಗಪ್ಪ ತೀರಿಕೊಂಡ ನಂತರ ಮೃತ್ಯು ಪತ್ರವನ್ನು ನಾನು, ಪಡೋಸಿ, ಮುಲ್ಲಾ ಹಾಗೂ 2 ನೇ ಪ್ರತಿವಾದಿ ಸಂಗಪ್ಪ ಸೇರಿಕೊಂಡು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಾನು ಕಾಗದ ಬರೆಯುವುದರಲ್ಲಿ ನಿಪುಣ ಎಂದರೆ ಸರಿಯಲ್ಲ. ಸಿದ್ಧಲಿಂಗಪ್ಪ ಕಾಗದ ಬರೆದುಕೊಟ್ಟಿಲ್ಲ ಎಂದು ಗೊತ್ತಿದ್ದರು ಸಹ 2 ನೇ ಪ್ರತಿವಾದಿ ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಃ **7** ರಿಂದ **9** ನೇ ಪ್ರತಿವಾದಿ ಪರ ಶ್ರೀ ಎನ್ ವಾಯ ಪಿ ವಕೀಲರಿಂದಃ</u>

7. ಸಿದ್ಧಲಿಂಗಪ್ಪ ತನ್ನ ಕುಟುಂಬಕ್ಕೆ ಸಂಬಂಧಪಟ್ಟ ಸ್ವತ್ತುಗಳ ಮಾಹಿತಿಯನ್ನು ನಿಮಗೆ ಕೊಟ್ಟಿದ್ದಾರಾ ಎಂದರೆ ಇಲ್ಲ. ಸಿದ್ಧಲಿಂಗಪ್ಪ ನನ್ನನ್ನು ವಿಲ್ ಸಂಬಂಧ ಸಾಕ್ಷಿಯಾಗಿ ಬರುವಂತೆ ಕರೆದಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಿದ್ಧಲಿಂಗಪ್ಪ ವಯೋಸಹಜ ಖಾಯಿಲೆಯಿಂದ ಬಳಲುತ್ತಿದ್ದ, 6 ವರ್ಷಗಳಿಂದ ಆತನಿಗೆ ಪ್ರಜ್ಞೆ ಇರಲಿಲ್ಲ ಎಂದರೆ ಸರಿಯಲ್ಲ. ದಿಃ 15-01-2020 ರಂದು ಸಂಕ್ರಾತಿ ಹಬ್ಬ ಇತ್ತು ಎಂದರೆ ಸರಿ. ಆ ಕಾರಣಕ್ಕಾಗಿ ಸರಕಾರಿ ಕಚೇರಿಗಳಿಗೆ ರಜೆ ಇರುತ್ತದೆ ಎಂದರೆ ಗೊತ್ತಿಲ್ಲ.

ಉಳಿದ ಪಾಟೀ ಸವಾಲು ಃ ವಾದಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳುತ್ತಾರೆ.

<u>ಮರು ವಿಚಾರಣೆ ಃ</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

Sd/-

ಹಿರಿಯ ದಿವಾಣಿ ನ್ಯಾಯಾಧೀಶರು,

ಕುಂದಗೋಳ.